**SC No.39 /2024**
**PW-3**
**CW-6**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **39/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಶ್ವಿನಿ ಪರಮೋಜಿ | ಪ್ರಾಸಾ: 3 |
| ತಂದೆಯ ಹೆಸರು | : | ಪ್ರಕಾಶ ಪರಮೋಜಿ | ಚಾಸಾ: 6 |
| ವಯಸ್ಸು | : | 33 ವರ್ಷ | ದಿನಾಂಕ : 18.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಖಾಸಗಿ ನೌಕರಿ | |
| ವಾಸಸ್ಥಳ | : | ಸರಸ್ವತಿ ನಗರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-1 ನನ್ನ ತಾಯಿ. ಚಾಸಾ-5 ನನ್ನ ತಂದೆ. ಚಾಸಾ-7 ನನ್ನ ತಮ್ಮ. ಮೃತ ಪ್ರಿಯಾಂಕಾ ನನ್ನ ತಂಗಿ. ಈಗ ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ನನ್ನ ತಂಗಿ ಪ್ರಿಯಾಂಕಾಳ ಮದುವೆ 2014ನೇ ಸಾಲಿನಲ್ಲಿ ವಿನೋದ ಬಿರ್ಜೆ ಎನ್ನುವವನೊಂದಿಗೆ ಆಗಿತ್ತು. ಆ ಮದುವೆಯಿಂದ ನನ್ನ ತಂಗಿಗೆ ಪ್ರಣವ ಮತ್ತು ವೈದೆಹಿ ಎನ್ನುವ 2 ಮಕ್ಕಳಿದ್ದರು. ಮದುವೆಯಾದ ಸುಮಾರು 4 ವರ್ಷಗಳ ನಂತರ ಪ್ರಿಯಾಂಕಾಳ ಗಂಡ ವಿನೋದ ಅನಾರೋಗ್ಯದ ಕಾರಣ ತೀರಿಕೊಂಡರು. ಗಂಡ ತೀರಿಕೊಂಡ ನಂತರ ನನ್ನ

ತಂಗಿ ಪ್ರಿಯಾಂಕಾ ಆಕೆಯ ಮಕ್ಕಳೊಂದಿಗೆ ನಮ್ಮ ಮನೆಯಲ್ಲಿ ವಾಸಮಾಡಿಕೊಂಡಿದ್ದಳು. ನನಗೆ ಮದುವೆಯಾಗಿದೆ. ನನ್ನ ಗಂಡನ ಮನೆ ಗೋಕಾಕ. ಕಳೆದ 6 ವರ್ಷಗಳಿಂದ ನಾನು ಬೆಳಗಾವಿಯಲ್ಲಿ ವಾಸಮಾಡಿಕೊಂಡಿದ್ದೇನೆ.

2. ಆಕೆಯ ಗಂಡ ತೀರಿಕೊಂಡ ನಂತರ ನನ್ನ ತಂಗಿ ಪ್ರಿಯಾಂಕಾ ಚಾಸಾ-8 ರವರಿಗೆ ಸೇರಿದ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು. ನನ್ನ ತಂಗಿಯ ದೊಡ್ಡ ಮಗನನ್ನು ಯಮನಾಪೂರದ ಬೆನ್ಸನ್ ಶಾಲೆಗೆ ದಾಖಲಿಸಲಾಗಿತ್ತು. ಆ ಬಳಿಕ ನನ್ನ ತಂಗಿ ತನ್ನ ಮಕ್ಕಳ ವಿದ್ಯಾಭ್ಯಾಸಕೊಸ್ಕರ ಯಮನಾಪೂರದಲ್ಲಿ ಬಾಡಿಗೆ ಮನೆ ಮಾಡಿ ಅಲ್ಲಿ ವಾಸಮಾಡಿಕೊಂಡು ಬರುತ್ತಿದ್ದಳು. ಯಮನಾಪೂರದಲ್ಲಿ ಸುಮಾರು 4 ತಿಂಗಳುಗಳ ಕಾಲ ಇದ್ದು, ಆ ಬಳಿಕ ಆಕೆ ತನ್ನ ಮಕ್ಕಳನ್ನು ವನಿತಾ ವಿದ್ಯಾಲಯ ಶಾಲೆಗೆ ದಾಖಲಿಸಿ ಆಕೆ ವಿನಾಯಕ ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಇದ್ದಳು. ಚಾಸಾ-2 ರವರು ಆ ಮನೆಯ ಮಾಲೀಕರಾಗಿದ್ದರು. ಯಮನಾಪೂರದಲ್ಲಿ ನನ್ನ ತಂಗಿ ವಾಸಮಾಡಿಕೊಂಡಿದ್ದ ಕಾಲಕ್ಕೆ ಆಕೆ ಮತ್ತು ಈ ಆರೋಪಿಯ ನಡುವೆ ಪ್ರೀತಿ ಉಂಟಾಗಿತ್ತು. ಆರೋಪಿಗೆ ಬೇರೆ ಮದುವೆಯಾಗಿ ಮಕ್ಕಳಿರುವುದರಿಂದ ನನ್ನ ತಂದೆ ತಾಯಿ ನನ್ನ ತಂಗಿ ಆರೋಪಿಯನ್ನು ಪ್ರೀತಿಮಾಡುವುದಕ್ಕೆ ತಕರಾರು ಮಾಡಿದ್ದರು. ಆ ಬಳಿಕ ನನ್ನ ತಂಗಿ ಮತ್ತು ಆರೋಪಿಯ ನಡುವೆ ಜಗಳವಾಗಿದ್ದು, ಆ ನಂತರ ನನ್ನ ತಂಗಿ ನಮ್ಮ ಮನೆಗೆ ಅವರ ಮಕ್ಕಳೊಂದಿಗೆ ಬಂದಿದ್ದಳು. ಆ ನಂತರ ಆಕೆ ವಿನಾಯಕ ನಗರದ ಬಾಡಿಗೆ ಮನೆಯಲ್ಲಿ ತನ್ನ ಮಕ್ಕಳೊಂದಿಗೆ ಬೇರೆಯೇ ವಾಸವಾಗಿದ್ದಳು.

3. ಆರೋಪಿಯು ಆ ಬಾಡಿಗೆ ಮನೆಗೆ ಬರಬೇಡ ಎಂದು ಹೇಳಿದ್ದರೂ ಕೂಡ ಆರೋಪಿ ಬರುತ್ತಿದ್ದನು. ದಿಃ 28.08.2023 ರಂದು ನನ್ನ ತಮ್ಮ ನನ್ನ ತಾಯಿಯನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿದ್ದನು. ಆಸ್ಪತ್ರೆಯಿಂದ ವಾಪಸ್ಸು ಬರುವಾಗ ನನ್ನ ತಾಯಿ ನನ್ನ ತಂಗಿಯ ಬಾಡಿಗೆ ಮನೆಗೆ ಹೋಗಿದ್ದು, ಆ ಕಾಲಕ್ಕೆ ಆರೋಪಿಯು ನನ್ನ ತಂಗಿಯ ಬಾಡಿಗೆಯ

ಮನೆಯಲ್ಲಿ ಇದ್ದನು. ನನ್ನ ತಾಯಿ ಮತ್ತು ನನ್ನ ತಮ್ಮ ಸೇರಿ ಆರೋಪಿಗೆ ಆ ಮನೆಗೆ ಬರದಂತೆ ತಾಕಿತು ಮಾಡಿದ್ದರು. ಆ ನಂತರ ದಿಃ 04.09.2023 ರ ವರೆಗೆ ನಮ್ಮ ತಂಗಿ ನಮ್ಮ ಮನೆಯಲ್ಲಿಯೇ ಇದ್ದರು. ದಿಃ 04.09.2023 ರಂದು ಬೆಳಿಗ್ಗೆ ನನ್ನ ತಂಗಿ ಕೆಲಸಕ್ಕೆ ಬಟ್ಟೆ ಅಂಗಡಿಗೆ ಹೋದಳು. ಕೆಲಸ ಮುಗಿಸಿ ಆಕೆ ವಿನಾಯಕ ನಗರದ ಬಾಡಿಗೆಯ ಮನೆಗೆ ಹೋಗಿದ್ದಳು. ಆಕೆ ನನ್ನ ತಂದೆಗೆ ಪೋನ್ ಮಾಡಿ ಆಕೆಯ ಮಕ್ಕಳನ್ನು ಆಕೆಯ ಬಾಡಿಗೆಯ ಮನೆಗೆ ತಂದು ಬಿಡಲು ಹೇಳಿದ್ದರು. ಮರುದಿನ ಶಾಲೆಗೆ ರಜೆ ಇರುವ ಕಾರಣ ನನ್ನ ತಂದೆ ನನ್ನ ತಂಗಿಗೆ ಆಕೆಯೇ ನಮ್ಮ ಮನೆಗೆ ಕರೆದಿದ್ದರು. ನನ್ನ ತಂಗಿ ತಾನು ರೇಷನ್ ಕಾರ್ಡ ಮಾಡಿಸುವ ಸಲುವಾಗಿ ಬೊಂಬರ್ಗಾ ಗ್ರಾಮಕ್ಕೆ ಹೋಗಿ ಬರುವುದಾಗಿ ಹೇಳಿದ್ದಳು. ಅದೇ ರಾತ್ರಿ 11-00 ಗಂಟೆ ಸುಮಾರಿಗೆ ಚಾಸಾ-2 ರವರು ನನ್ನ ತಾಯಿಗೆ ಪೋನ್ ಮಾಡಿ ನನ್ನ ತಂಗಿ ನೇಣು ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿಸಿದರು. ಆ ಕೂಡಲೇ ನಾನು, ನನ್ನ ತಂದೆ ತಾಯಿ ಮತ್ತು ತಮ್ಮ ಸೇರಿ ವಿನಾಯಕ ನಗರದ ಆ ಬಾಡಿಗೆ ಮನೆಗೆ ಹೋದೆವು. ನಾವು ಆ ಮನೆಯ ಕಿಟಕಿಯ ಮೂಲಕ ನೋಡಿದಾಗ ನಮ್ಮ ತಂಗಿ ನೇಣು ಹಾಕಿಕೊಂಡು ಆತ್ನಹತ್ಯೆ ಮಾಡಿಕೊಂಡಿದ್ದು ಕಂಡು ಬಂತು. ಆ ಬಳಿಕ ಪೋಲಿಸರು ಬಂದು ಮನೆಯ ಬಾಗಿಲನ್ನು ತೆಗೆದು ಒಳಗಡೆ ಹೋಗಿದ್ದರು. ನನ್ನ ತಂಗಿ ಆಕೆಯ ಓಡ್ನಿಯ ಮೂಲಕ ಮನೆಯ ಅಡುಗೆ ಕೋಣೆಯ ತೊಲೆಯ ಹುಕ್ಕಿಗೆ ನೇಣು ಹಾಕಿಕೊಂಡಿದ್ದಳು. ಪೋಲಿಸರು ಆಕೆಯ ಶವವನ್ನು ಕೆಳಗೆ ಇಳಿಸಿ ಆ ಬಳಿಕ ಆ ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ನಾನು ಆಕೆಯ ಶವವನ್ನು ನೋಡಿದಾಗ ನಾಲಿಗೆ ಹೊರಗಡೆ ಬಂದಿತ್ತು. ಕುತ್ತಿಗೆಯ ಸುತ್ತ ನೇಣು ಹಾಕಿದ ಗುರುತುಗಳು ಇದ್ದವು. ಪೋಲಿಸರು ಸ್ಥಳದಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 3-00 ಗಂಟೆಯವರೆಗೆ ಮಾಡಿದ್ದರು .

4. ಈ ಘಟನೆಯಾದ ಸುಮಾರು 4-5 ದಿನಗಳ ನಂತರ ನನ್ನ ತಂದೆ ತಾಯಿ ಆ ಮನೆಯನ್ನು ಸ್ವಚ್ಛ ಮಾಡಲು ಹೋಗಿದ್ದಾಗ ಮನೆಯ ಮಾಲೀಕರು ನನ್ನ ತಂಗಿ ಆತ್ಮಹತ್ಯೆ

ಮಾಡಿಕೊಳ್ಳುವ ಮೊದಲು ಜೋರಾಗಿ ಪೋನಿನಲ್ಲಿ ಮಾತನಾಡಿಕೊಳ್ಳುತ್ತಿದ್ದಳು ಎಂದು ಹೇಳಿದರು. ಆ ನಂತರ ನನ್ನ ತಾಯಿ ಈ ಆರೋಪಿಯ ವಿರುದ್ದ ಪೋಲಿಸ ಪಿರ್ಯಾದಿಯನ್ನು ಕೊಟ್ಟಿದ್ದರು. ನನ್ನ ತಂಗಿ ನೇಣು ಹಾಕಲು ಉಪಯೋಗಿಸಿದ ಓಡ್ನಿಯನ್ನು ನೋಡಿದ್ದಲ್ಲಿ ನಾನು ಗುರುತಿಸುತ್ತಿದ್ದು ಅದನ್ನು ಮು ಮಾ 1 ಎಂದು ಈಗಾಗಲೇ ಗುರುತಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎ. ವಿ. ಎನ್. ವಕೀಲರಿಂದಃ

ಆರೋಪಿ ಪರ ವಕೀಲರು ಗೈರು ಹಾಜರು, ಆರೋಪಿಯು ಪಾಟೀ ಸವಾಲಿಗೆ ಸಮಯ ಕೇಳುತ್ತಾರೆ, ಸಮಯ ನೀಡಲು ಯಾವುದೇ ಸಕಾರಣಗಳು ಇಲ್ಲ, ಆ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.